International Journal of Kannada Research
www.kannadajournal.com

ISSN: 2454–5813
IJKR 2022; 8(4): 118-120
© 2022 IJKR
www.kannadajournal.com
Received: 15-09-2022
Accepted: 19-10-2022

**ಡಾ. ಎಚ್. ಎಂ. ಮಹೇಶ್**
ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ, ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜು, ಚಿಕ್ಕಮಗಳೂರು, ಕರ್ನಾಟಕ, ಭಾರತ

Corresponding Author:
**ಡಾ. ಎಚ್. ಎಂ. ಮಹೇಶ್**
ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ, ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜು, ಚಿಕ್ಕಮಗಳೂರು, ಕರ್ನಾಟಕ, ಭಾರತ

# ಚಂದ್ರಯ್ಯನಾಯ್ಡುರವರ ವ್ಯಕ್ತಿನಿಷ್ಠ ವಚನಗಳು

**ಡಾ. ಎಚ್. ಎಂ. ಮಹೇಶ್**

## ಪೀಠಿಕೆ

ಗದ್ಯವೂ ಅಲ್ಲದ ಪದ್ಯವೂ ಅಲ್ಲದ ವಿಶಿಷ್ಟ ಪ್ರಕಾರವಾಗಿರುವ 'ವಚನ' ಸಾಹಿತ್ಯ ಕನ್ನಡಕ್ಕೆ ಹೊಸದಲ್ಲ. ಹನ್ನೆರಡನೆಯ ಶತಮಾನದ ಬಸವಾದಿ ಶರಣರಿಂದ ಆರಂಭವಾಗಿ ಇಂದಿನವರೆಗೂ ಬೆಳೆದುಬಂದಿದೆ. ವಸ್ತು ಮತ್ತು ಆಶಯ ಕಾಲದಿಂದ ಕಾಲಕ್ಕೆ ಬದಲಾದರೂ ವಚನಗಳ ಸ್ವರೂಪದಲ್ಲಿ ಅಂತಹ ಬದಲಾವಣೆಗಳಾಗಿಲ್ಲ. ಆಧುನಿಕ ಸಂದರ್ಭದಲ್ಲಿ ವಚನಗಳಲ್ಲಿ ವೈವಿಧ್ಯತೆ ಕಾಣಿಸಿಕೊಂಡಿತು. ಸಮಾಜ ಕೇಂದ್ರಿತ ವಚನಗಳು ಕೆಲವೊಮ್ಮೆ ವ್ಯಕ್ತಿ ಕೇಂದ್ರಿತವಾಗಿಯೂ ಗಮನ ಸೆಳೆದವು. ತಮಗೆ ಇಷ್ಟವಾದ ವ್ಯಕ್ತಿಯೊಬ್ಬರನ್ನು ಕುರಿತು ಬರೆಯಲು 'ವಚನ' ಮಾಧ್ಯಮವನ್ನು ಬಳಸಿಕೊಂಡದ್ದು ಇಲ್ಲಿಯ ವಿಶೇಷ. ಕನ್ನಡದಲ್ಲಿ ಅಂತಹ ಪ್ರಯತ್ನವನ್ನು ಕೆಲವರು ಮಾಡಿದ್ದಾರೆ. ಅವರುಗಳಲ್ಲಿ ಹತ್ತಕ್ಕೂ ಹೆಚ್ಚು ವ್ಯಕ್ತಿಗಳ ವೈಯುಕ್ತಿಕ ಸಿದ್ಧಿ ಸಾಧನೆಗಳನ್ನು ವಚನಗಳಲ್ಲಿ ಹಿಡಿದಿಟ್ಟಿರುವ ಕೀರ್ತಿ ಚಂದ್ರಯ್ಯನಾಯ್ಡು ಅವರಿಗೆ ಸಲ್ಲುತ್ತದೆ.

ಪೂರ್ಣ ಪ್ರಮಾಣದಲ್ಲಿ ವ್ಯಕ್ತಿನಿಷ್ಠ ವಚನಗಳನ್ನು ಬರೆದವರಲ್ಲಿ ನಾಯ್ಡು ಅವರು ಮೊದಲಿಗರೇನಲ್ಲ. ಈಗಾಗಲೇ "ಗು. ಶಂಕರಮ್ಮ ಅವರು ಡಾ.ಜಚನಿ ಅವರನ್ನು ಕುರಿತು 'ಜಚನಿ ಜೀವನ ವಚನ'ವನ್ನು ರಚಿಸಿರುತ್ತಾರೆ. ಡಾ.ಜಚನಿ ಅವರು ಗಿರಿಯಾಪುರದ ಸದಾಶಿವಾಚಾರ್ಯರನ್ನು ಕುರಿತು 'ಸದಾಶಿವ ಸೂಳ್ನುಡಿ' ಕೃತಿ ರಚಿಸಿರುತ್ತಾರೆ. ಶ್ರೀಮತಿ ಶಿವಲಿಂಗಮ್ಮ ಕಟ್ಟಿ ಅವರ 'ಜಡೆಯೊಡಯನ ನೂರೆಂಟು ವಚನಗಳು', ದಾನಪ್ಪ ಬಗಲಿ ಅವರ 'ಕಾವ್ಯಶಿವ ಕುವೆಂಪು' ಭಾಗ-೧ ಮತ್ತು ೨, ಯಲ್ಲಪ್ಪ ಹಲಕುರ್ಕಿ ಅವರು ಡಾ. ಪಂಚಾಕ್ಷರಿ ಹಿರೇಮಠ ಅವರನ್ನು ಕುರಿತು ಬರೆದ 'ವಚನ ಪಂಚಾಕ್ಷರಿ', ಡಾ.ಸಂಗಮೇಶ ಹಂಡಿಗಿ ಅವರು ಶ್ರೀ ಚನ್ನವೀರ ಶರಣರನ್ನು ಕುರಿತು ಬರೆದ 'ಶರಣಾನುಭವ' ಹಾಗೂ ರಂಭಾಪುರಿ ಜಗದ್ಗುರುಗಳನ್ನು ಕುರಿತು ಬರೆದ 'ವಚನ ಸ್ತವನ' ಪ್ರಮುಖ ವ್ಯಕ್ತಿನಿಷ್ಠ ವಚನ ಸಂಕಲನಗಳಾಗಿವೆ."[೧]

ಆಧುನಿಕ ವಚನಕಾರರಲ್ಲಿ ಹೆಚ್ಚು ವ್ಯಕ್ತಿನಿಷ್ಠ ವಚನಗಳನ್ನು ಬರೆದ ಕೀರ್ತಿ ನಾಯ್ಡು ಅವರಿಗೆ ಸಲ್ಲುತ್ತದೆ. ನಾಡಿನ ಏಳಿಗೆಗಾಗಿ ದುಡಿದಿರುವ ಮತ್ತು ದುಡಿಯುತ್ತಿರುವ ಧಾರ್ಮಿಕ ನೇತಾರರು, ಸಮಾಜ ಸುಧಾರಕರು, ಮಾನವತಾವಾದಿಗಳು, ಕ್ರಿಯಾಶೀಲ ಜನಸೇವಕರು ಇಲ್ಲಿಯ ವಚನಗಳಿಗೆ ವಸ್ತುವಾಗಿದ್ದಾರೆ. ಆದಿಚುಂಚನಗಿರಿ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳನ್ನು ಕುರಿತ 'ವಚನಾಭಿನಂದನ', ರಂಭಾಪುರಿ ಪೀಠದ ಜಗದ್ಗುರು ಶ್ರೀ ಪ್ರಸನ್ನ ರೇಣುಕ ವೀರ ಸೋಮೇಶ್ವರ ಭಗವತ್ಪಾದಂಗಳವರನ್ನು ಕುರಿತ 'ವಚನಾಭಿವಂದನ', ಕೋಡಿಮಠದ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳನ್ನು ಕುರಿತು ಬರೆದ 'ವಚನ ನಮನ', ಭಾರತದ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ.ಪಾಟೀಲ ಅವರನ್ನು ಕುರಿತು ಬರೆದ 'ವಚನ ಶಿವ', ಧರ್ಮಸ್ಥಳದ ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಕುರಿತು ಬರೆದ 'ವಚನ ವೀರೇಂದ್ರ', ಜನಪ್ರಿಯ ಮಕ್ಕಳ ವೈದ್ಯ ಮತ್ತು ಸಮಾಜ ಸೇವಕ ಡಾ. ಜೆ.ಪಿ. ಕೃಷ್ಣೇಗೌಡ ಅವರನ್ನು ಕುರಿತು ಬರೆದ 'ವಚನಾರತಿ', ಕುಪ್ಪೂರು ಗದ್ದಿಗೆ ಮಠದ ಶ್ರೀ ಯತೀಶ್ವರ ಶಿವಾಚಾರ್ಯರನ್ನು ಕುರಿತು ಬರೆದ 'ಯತೀಶ್ವರ ವಚನಗಳು', ವಚನ ಸಾಹಿತಿ ಸಂಗಮೇಶ ಹಂಡಿಗಿ ಅವರನ್ನು ಕುರಿತು ಬರೆದ 'ವಚನಸಂಗಮೇಶ', ವಚನಕಾರ್ತಿ ಶ್ರೀಮತಿ ಸೀತಾ ಗೋಪಾಲ ಗಾಂವಕರ ಅವರನ್ನು ಕುರಿತು ಬರೆದ 'ವಚನ ರತ್ನ', ನಿಷ್ಠಾವಂತಜನ ಸೇವಕ ಬೈಕೆರೆ ನಾಗೇಶ್ ಅವರನ್ನು ಕುರಿತು ಬರೆದ 'ವಚನ ಜ್ಯೋತಿ', ಇವೆಲ್ಲ ನಾಯ್ಡು ಅವರ ವ್ಯಕ್ತಿನಿಷ್ಠ ವಚನ ಸಂಕಲನಗಳಾಗಿವೆ.

ನಾಯ್ಡು ಅವರು ವಚನಗಳಿಗೆ ವಸ್ತುವಾಗಿ ವ್ಯಕ್ತಿಯೊಬ್ಬರನ್ನು ಆಯ್ದುಕೊಂಡಾಗ ಆ ವ್ಯಕ್ತಿಯ ಜನಪ್ರಿಯತೆ, ಅಧಿಕಾರ, ಅಂತಸ್ತು, ಸ್ಥಾನಮಾನ, ಶಕ್ತಿ, ಸಿರಿತನ ಇವೇ ಮುಖ್ಯವಾಗುವುದಿಲ್ಲ. ಮೌಲ್ಯಗಳ ಮೇಲೆ ಬೆಳಕು ಚೆಲ್ಲುವುದೇ ಇಲ್ಲಿ ಮುಖ್ಯವಾಗುತ್ತದೆ. ತಮ್ಮ ಸೂಕ್ಷ್ಮ ವಿವೇಚನೆಯಿಂದ ಆ ವ್ಯಕ್ತಿಯ ಅಂತರಂಗ, ಅವರಲ್ಲಿರುವ ಸಾಮಾಜಿಕ ಕಳಕಳಿ, ನಿಸ್ವಾರ್ಥ ಸೇವೆ, ಗುಣಸ್ವಭಾವ, ಅವರ ಸಂಸ್ಕೃತಿ, ಸಂಸ್ಕಾರ ಮುಂತಾದ ಮಾನವೀಯ ಮೌಲ್ಯಗಳನ್ನು ಓದುಗರ ಮುಂದೆ ತೆರೆದಿಡುವ ಪ್ರಯತ್ನವನ್ನು ನಾಯ್ಡು ಮಾಡಿದ್ದಾರೆ. ಪ್ರತ್ಯಕ್ಷವಾಗಿ ಕಂಡು ಕೇಳಿ ಅನುಭವಿಸಿದ ಸಂಗತಿಗಳೇ'ವಚನ'ಗಳಾಗಿ ರೂಪು ತಾಳಿವೆ.

ವಚನಗಳ ಪ್ರಮುಖ ವೈಶಿಷ್ಟ್ಯ ಅಂಕಿತಗಳು.'ಸತ್ಯಪ್ರಿಯ' ಅಂಕಿತದಲ್ಲಿ ಸಾಮಾನ್ಯ ವಚನಗಳನ್ನು ಬರೆದಿರುವ ನಾಯ್ಡು ಅವರು ವ್ಯಕ್ತಿನಿಷ್ಠ ವಚನಗಳನ್ನು ಬರೆಯುವ ಸಂದರ್ಭದಲ್ಲಿ ಯಾರನ್ನು ಕುರಿತು ವಚನ ಬರೆದಿದ್ದಾರೋ ಅವರ ಹೆಸರನ್ನೇ ಅಂಕಿತವನ್ನಾಗಿ ಬಳಸಿರುವುದು ಈ ವಚನಗಳ ವಿಶೇಷವಾಗಿದೆ.

ಬುದ್ಧನನ್ನು ಕುರಿತು ಓದಿದೆ
ಬಸವನನ್ನು ಕುರಿತು ಓದಿದೆ
ಗಾಂಧೀಜಿಯನ್ನು ಕುರಿತು ಓದಿದೆ
ಅಂಬೇಡ್ಕರ್‌ನನ್ನು ಕುರಿತು ಓದಿದೆ
ಆದರೆ ಇವರೆಲ್ಲರನ್ನು ನಿಮ್ಮಲ್ಲಿ ಕಂಡೆನಯ್ಯಾ
ನಿಮ್ಮ ಘನಕಾರ್ಯಗಳನ್ನು ಕಣ್ಣಾರೆ ಕಂಡು
ಸಾಮಿಪ್ಯದಿಂದ ಅನುಭವಿಸಿ
ಕಿವಿಯಾರೆ ಕೇಳಿ ಮನದುಂಬಿ
ವಚನ ಬರೆದೆನಯ್ಯಾ
ಕಾಲಭೈರವೇಶ್ವರ ಪ್ರಿಯ
ಶ್ರೀ ಶ್ರೀ ಬಾಲಗಂಗಾಧರನಾಥ ಪ್ರಭುವೆ ೨

ಭಕ್ತರ ಅಕ್ಷಯ ನಿಧಿಯಂತಿದ್ದ ಆದಿಚುಂಚನಗಿರಿ ಶ್ರೀಗಳು ಎಂಥವರನ್ನೂ ಸೆಳೆಯುವ ಗುಣವುಳ್ಳವರಾಗಿದ್ದರು. ಮಠದ ಭಕ್ತರಾದ ಕವಿ ಚಂದ್ರಯ್ಯನಾಯ್ಡು ಅವರಿಗೆ ಶ್ರೀಗಳ ಘನ ಕಾರ್ಯಗಳೇ ಸ್ಫೂರ್ತಿ, ಪ್ರೇರಣೆಯಾಗಿವೆ. ಭಾರತದ ಚರಿತ್ರೆಯಲ್ಲಿ ಅಜರಾಮರರಾಗಿರುವ ಬುದ್ಧ, ಬಸವಣ್ಣ, ಗಾಂಧಿ, ಅಂಬೇಡ್ಕರ್‌ರಂಥ ಮಹಾನ್ ವ್ಯಕ್ತಿಗಳ ಗುಣಗಳೆಲ್ಲವನ್ನೂ ಶ್ರೀಗಳಲ್ಲಿ ಕಂಡಿದ್ದಾರೆ.

ವಿಚಾರವಾದಿಗಳೂ ಮಣಿದರಯ್ಯಾ
ಆಚಾರವಾದಿಗಳೂ ಮಣಿದರಯ್ಯ
ವಿಜ್ಞಾನಿಗಳೂ ಮಣಿದರಯ್ಯ
ತಂತ್ರಜ್ಞಾನಿಗಳೂ ಮಣಿದರಯ್ಯ
ಆಸ್ತಿಕರೂ, ನಾಸ್ತಿಕರೂ ಮಣಿದರಯ್ಯ
ಪ್ರಗತಿಪರರೂ ಮಣಿದರಯ್ಯ
ಅಯ್ಯಾ ಜಗದ್ಗುರು ಶ್ರೀ ರೇಣುಕ ಪ್ರಿಯ
ವೀರ ಸೋಮೇಶ್ವರ ಪ್ರಭುವೆ
ನಿಮ್ಮದು ಆಕರ್ಷಕ ವ್ಯಕ್ತಿತ್ವ ಕಾಣಾ ೩

ಧರ್ಮವನ್ನು ವೈಜ್ಞಾನಿಕ ನೆಲೆಯಲ್ಲಿ ಸಾಕಾರಗೊಳಿಸುವ ಬಾಳೆಹೊನ್ನೂರಿನ ಶ್ರೀ ಮದ್ರಂಭಾಪುರಿ ಪೀಠದ ಶ್ರೀಗಳು ಆಸ್ತಿಕ ನಾಸ್ತಿಕರ ನಡುವೆ ಪ್ರಗತಿಪರ ಚಿಂತನೆಗಳನ್ನು ಬಿತ್ತಿದರು. ವಿಜ್ಞಾನಿ, ತಂತ್ರಜ್ಞಾನಿ, ತತ್ವಜ್ಞಾನಿಗಳನ್ನೂ ತಮ್ಮ ಚಿಂತನೆಗಳಿಂದ ಮಣಿಸಿ ಆಧುನಿಕ ಸಮಾಜದ ನಿರ್ಮಾತೃಗಳೆನಿಸಿದ್ದಾರೆ. ವೇದಶಾಸ್ತ್ರ ಪುರಾಣಗಳಷ್ಟೇ ಅಲ್ಲದೇ ಕಲೆ, ಸಾಹಿತ್ಯ, ಸಂಗೀತ, ಜಾನಪದದ ಜ್ಞಾನವನ್ನು ಸಂಪಾದಿಸಿದವರು. ಡಾ.ಪಂಚಾಕ್ಷರಿ ಹಿರೇಮಠ ಅವರು ಹೇಳಿರುವಂತೆ "ಪೂಜ್ಯ ಜಗದ್ಗುರುಗಳ ಸಮಗ್ರವಾದ ಜೀವನ ಕಾರ್ಯಸಾಧನೆ, ಲೋಕಹಿತ, ರಾಷ್ಟ್ರಭಕ್ತಿ, ಮಾನವತೆಯನ್ನು ಶಿವ ಬದುಕನ್ನು ಜನತೆಗೆ ಕೊಡುವಲ್ಲಿ ಅವರು ವಹಿಸಿದ ಪಾತ್ರ ಎಲ್ಲವನ್ನೂ ಅರವತ್ತೊಂದು ವಚನಗಳಲ್ಲಿ ಹಿಡಿದಿಟ್ಟಿರುವ ವಚನಕಾರರ ಪ್ರತಿಭೆ ಅಭೂತಪೂರ್ವವಾದುದು."೪
ಇಲ್ಲಿಯ ವಚನಗಳು ಕನ್ನಡದ ಭಕ್ತಿ ಸಾಹಿತ್ಯ ಪರಂಪರೆಗೆ ಸೇರುತ್ತವೆ. ಇಲ್ಲಿ ಭಕ್ತಕವಿಯ ಭಕ್ತಿಯ ಪರಾಕಾಷ್ಟೆ ಉಕ್ಕಿ ಹರಿದಿದೆ. ಭಕ್ತಿ ಪ್ರಪಂಚದ ತನ್ಮಯತೆ, ಅನನ್ಯತೆ ಸಾಕಾರಗೊಂಡಿದೆ. ಧರ್ಮವನ್ನು ಜೀವನ ಧರ್ಮವನ್ನಾಗಿಸುವ ಮಾರ್ಗದಲ್ಲಿ ಸಾಗುವ ಇಲ್ಲಿಯ ವಚನಗಳು ಬಿಡಿಯಾದ ಆಶಯಗಳನ್ನು ಇಡಿಯಾಗಿ ಕಟ್ಟಿಕೊಡುವ ಪ್ರಯತ್ನದಲ್ಲಿ ಸಾಗುತ್ತವೆ. ಸಾರ್ವಕಾಲಿಕ ಸ್ವೀಕಾರ ಯೋಗ್ಯವಾದ ತತ್ವಗಳೂ ಇಲ್ಲಿ ಗೋಚರಿಸುತ್ತವೆ. ಇಲ್ಲಿಯ ವಚನಗಳಲ್ಲಿ ಮತ ದರ್ಶನವಿದೆ. ಶಾಸ್ತ್ರ ವಿಷಯವಿದೆ. ಆದರೆ ಅಲ್ಲಿಗೆ ನಿಲ್ಲದೆ ಸಮಸ್ತ ಜೀವರಾಶಿಗೂ ಲೇಸನ್ನು ಬಯಸುವ ಅಂತಃಕರಣವಿದೆ. ಭಾರತದ ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರಾಗಿ ನಿವೃತ್ತರಾಗಿರುವ ನ್ಯಾಯಮೂರ್ತಿ ವಿ. ಶಿವರಾಜ ಪಾಟೀಲ ಅವರನ್ನು ಕುರಿತ ವಚನವೊಂದು ಹೀಗಿದೆ.

ಶರಣರ ಬಗ್ಗೆ ಕೇಳಿದ್ದೆ
ಶರಣರ ಬಗ್ಗೆ ಓದಿದ್ದೆ
ಶರಣರೆಂದರೆ ಯಾರೆಂದು ಹಂಬಲಿಸಿದ್ದೆ
ನಿಮ್ಮಲ್ಲಿ ಶರಣರ ಕಂಡೆ ನೋಡಾ
ನ್ಯಾಯಮೂರ್ತಿ ಶ್ರೀ ಶಿವರಾಜ ವಿ. ಪಾಟೀಲ! ೫

ದೇ.ಜ.ಗೌ ಹೇಳುವಂತೆ "ಸ್ವಪ್ರತಿಷ್ಟೆ ಮತ್ತು ಅಹಂಕಾರ ನಿರಸನ ಹಾಗೂ ಸಾಮಾಜಿಕ ಸ್ತರವನ್ನು ಮರೆತು ಎಲ್ಲರನ್ನೂ ಒಡನಾಡಿಗಳಂತೆ ಸಹಾನುಭೂತಿಯಿಂದ ಕಾಣುವುದೇ ಮಾನವೀಯ ಲಕ್ಷಣವೆನ್ನುವುದಾದರೆ ನ್ಯಾಯಮೂರ್ತಿ ಪಾಟೀಲರು ಶ್ರೇಷ್ಠ ದರ್ಜೆಯ ಮಾನವತಾವಾದಿಗಳ ಸಮುದಾಯಕ್ಕೆ ಸೇರುತ್ತಾರೆ."೬ ಅಪ್ಪಟ ಕನ್ನಡಿಗರಾದ ಇವರು ಆದರ್ಶ ಶರಣರಾಗಿದ್ದಾರೆ. ನಿಜವಾದ ಶರಣರ ದರ್ಶನ ಇವರಿಂದ ಆಯಿತು ಎಂಬುದು ವಚನಕಾರರ ಅಭಿಮಾನದ ಮಾತಾಗಿದೆ. ನಡೆನುಡಿಯಲ್ಲಿ ಆದರ್ಶರಾಗಿರುವ ಇವರು ಹಲವುಆದರ್ಶಗಳಿಗೆ ಬೆರಳಾಗಿ ಆದರ್ಶ ಶರಣರೆನಿಸಿದ್ದಾರೆ.

ಕರುಣೆಯ ಕೋಡಿ
ದಯೆಯ ಕೋಡಿ
ಮಾನವತೆಯ ಕೋಡಿ
ಮಮತೆ, ವಾತ್ಸಲ್ಯಗಳ ಕೋಡಿ
ಸೌಹಾರ್ದತೆಯ ಕೋಡಿ
ಸಾಮರಸ್ಯ-ಸಮನ್ವಯದ ಕೋಡಿ
ಇಂತಹ ಹಲವು ಕೋಡಿಗಳು ಕೂಡಿ
ಕೋಡಿಮಠ ಸಾರ್ಥಕ ಹೆಸರಾಯಿತು
ನೋಡಾ ಶಿವಲಿಂಗೇಶ್ವರ ಪ್ರಿಯ
ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಪ್ರಭುವೆ ! ೭

'ಕೋಡಿ' ಎನ್ನುವ ಪದವು ತುಂಬಿ ತುಳುಕು ಎನ್ನುವ ಅರ್ಥವನ್ನು ಹೊಂದಿದ್ದು, ಕರುಣೆ, ದಯೆ, ಮಾನವತೆ, ಮಮತೆ, ಔದಾರ್ಯ ಸಾಮರಸ್ಯ ಶ್ರೀ ಕೋಡಿಮಠದಲ್ಲಿ ತುಂಬಿ ತುಳುಕುತ್ತಿವೆ ಎನ್ನುವ ವಚನಕಾರರ ಮಾತು ಸಾರ್ಥಕತೆಯನ್ನು ಪ್ರತಿಬಿಂಬಿಸುತ್ತದೆ. ಕೋಡಿಮಠ ಹೆಸರಿನ ಸಾರ್ಥಕತೆಯನ್ನು ಬಾಯ್ತುಂಬ ಹೊಗಳಿದ ಕವಿ ತೃಪ್ತನಾಗದೆ "ಕೋಡಿಮಠ ಕರ್ನಾಟಕದ ಕಣ್ಣು, ಕರುಣೆಯ ಕಾಶಿ,

ದಯೆಯ ಗಯೆ, ಮಮತೆಯ ಮಂದಿರ, ಸರ್ವಜನಾಂಗದ ತೊಟ್ಟಿಲು, ಮಾನವತೆಯ ಕರುಳು ಬಳ್ಳಿ" ಎಂದು ಹೇಳಿ ಸಂಭ್ರಮಿಸುವ ಪರಿಯನ್ನು ಕಾಣಬಹುದು. ಹೀಗೆ "ಕವಿ ರೂಪಕಗಳ ಸರಮಾಲೆಯನ್ನೇ ಹೆಣೆಯುತ್ತ ಹೋಗುತ್ತಾರೆ. ಇದು ಭಕ್ತಕವಿ ಹರಿಹರನ ರಗಳೆಯ ಶೈಲಿಯನ್ನು ನೆನಪಿಸುತ್ತದೆ."[೮] ನಾಡಿನ ಮಠ ಮಾನ್ಯಗಳಲ್ಲಿಯೇ ಭಿನ್ನವಾಗಿ ಗುರುತಿಸಿಕೊಳ್ಳುವ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರ ವ್ಯಕ್ತಿತ್ವಕ್ಕೆ ನಾಯ್ಡು ಮನಸ್ಸೋತಿದ್ದಾರೆ.

ಸಂಸಾರ ತ್ಯಜಿಸಲಿಲ್ಲ ಕಾವಿ ತೊಡಲಿಲ್ಲ
ಗುರು, ಜಗದ್ಗುರುವಾಗಲಿಲ್ಲ
ನಿಮ್ಮ ವ್ಯಕ್ತಿತ್ವ ಕಾರ್ಯ ವೈಖರಿಗಳಿಂದಲೇ
ಲೋಕಮಾನ್ಯರಾದಿರಯ್ಯ
ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಪ್ರಿಯ
ಡಾ॥ ಡಿ. ವೀರೇಂದ್ರ ಹೆಗ್ಗಡೆ![೯]

ಸಾಧನೆಯ ಹಾದಿಯಲ್ಲಿರುವ ಹೆಗ್ಗಡೆಯವರಿಗೆ ಸಂಸಾರ ಬಂಧನವಾಗಲಿಲ್ಲ. ಸಂಸಾರಿಗಳಾಗಿದ್ದುಕೊಂಡು ಜನರ ನಾಡಿಯನ್ನು ಅರಿಯುವ ಪ್ರಯತ್ನ ಮಾಡಿದರು. ಧರ್ಮಾಧಿಕಾರಿಗಳಾಗಿ ಕಾವಿ ತೊಟ್ಟವರಲ್ಲ. ಜಗದ್ಗುರುವೆಂಬ ಪಟ್ಟವನ್ನು ಕಟ್ಟಿಸಿಕೊಂಡವರಲ್ಲ. ಸಾಮಾನ್ಯರಂತೆಯೇ ಬದುಕಿ ತಮ್ಮ ಮಡಿಬಾಳ್ವೆಯಿಂದ, ಸಾಧನೆಯ ಸಿದ್ದಿಯಿಂದ, ಗುಣಶೀಲ ಕಾರ್ಯ ಕ್ಷಮತೆಯಿಂದ ಲೋಕಮಾನ್ಯರಾಗಿದ್ದಾರೆ. ಡಾ. ಜೆ.ಪಿ. ಕೃಷ್ಣೇಗೌಡರು ವೃತ್ತಿಯಿಂದ ಮಕ್ಕಳ ವೈದ್ಯರು. ಪ್ರವೃತ್ತಿಯಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ ಆರಾಧಕರು. ಜನಸೇವೆಯಲ್ಲಿ ಜನಾರ್ಧನನನ್ನು ಕಾಣುತ್ತಿರುವ ಗೌಡರ ನಡೆ-ನುಡಿಗೆ ನಾಯ್ಡು ತಲೆದೂಗಿದ್ದಾರೆ.

ಒಪ್ಪ ಓರಣವ ನಿಮ್ಮಿಂದ ಕಲಿಯಬೇಕಯ್ಯ
ಶಿಸ್ತು ಸಂಯಮವ ನಿಮ್ಮಿಂದ ಕಲಿಯಬೇಕಯ್ಯ
ವಿನಯ ಸೌಜನ್ಯವ ನಿಮ್ಮಿಂದ ಕಲಿಯಬೇಕಯ್ಯ
ಸಂಸ್ಕಾರ ಸಂಸ್ಕೃತಿಯ ನಿಮ್ಮಿಂದ ಕಲಿಯಬೇಕಯ್ಯ
ಕಾಯಕ ಪ್ರೀತಿಯ ನಿಮ್ಮಿಂದ ಕಲಿಯಬೇಕಯ್ಯ
ಜೀವನೋತ್ಸಾಹ, ಜೀವನ ಶ್ರದ್ದೆ ನಿಮ್ಮಿಂದ ಕಲಿಯಬೇಕಯ್ಯ
ಜೀವನಕ್ಕೆ ನೀವೊಂದು ಆದರ್ಶ ಕಾಣಾ
ಕನ್ನಡ ಕುವರ ಡಾ.ಜೆ.ಪಿ.ಕೃಷೇಗೌಡ ![೧೦]

ಗೌಡರ ಜೀವನೋತ್ಸಾಹ, ವಿನಯವಂತಿಕೆಯನ್ನು ಸರ್ವರಲ್ಲಿಯೂ ಕಾಣುವ ಆಸೆ ನಾಯ್ಡು ಅವರದ್ದಾಗಿದೆ. ಗೌಡರ ಬದುಕು ತೆರೆದ ಪುಸ್ತಕ. ಅವರು ಸಮಾಜಕ್ಕೆ ಮಾದರಿ. ಅವರ ಶಿಸ್ತು, ಸಂಯಮ, ಸೌಜನ್ಯ, ಸಂಸ್ಕಾರ, ಪ್ರೀತಿ, ಕಾಯಕ ನಿಷ್ಠೆ ಮೊದಲಾದ ಗುಣಗಳನ್ನು ಪಾಲಿಸಿದವರ ಬದುಕು ಹಸನಾಗುತ್ತದೆ. ಯಶಸ್ವಿ ಬದುಕಿಗೆ ಇವು ಪ್ರೇರಣೆಗಳಾಗುತ್ತವೆ.

ಆಧುನಿಕ ವಚನಕಾರರಾಗಿ ವಿಶಿಷ್ಟ ಪ್ರಯೋಗಗಳನ್ನು ಮಾಡಿರುವ ನಾಯ್ಡು ಅವರು ಸಾಮಾನ್ಯ ವಚನಗಳ ಜೊತೆಗೆ ವ್ಯಕ್ತಿನಿಷ್ಠ ವಚನಗಳನ್ನು ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ. ಆದರೆ ಇವರ ವಚನಗಳಲ್ಲಿ ಸಾಮಾನ್ಯ ವಚನಗಳು ಗಳಿಸಿದ ಮನ್ನಣೆಯನ್ನು ವ್ಯಕ್ತಿನಿಷ್ಠ ವಚನಗಳು ಗಳಿಸಲಿಲ್ಲ. ಓದುಗರಿಗೆ ಸಾಮಾನ್ಯ ವಚನಗಳು ಪ್ರಿಯವಾದಂತೆ ವ್ಯಕ್ತಿನಿಷ್ಠ ವಚನಗಳು ಪ್ರಿಯವಾಗಲಿಲ್ಲ ಎನಿಸುತ್ತದೆ. ಸಾಮಾನ್ಯ ವಚನಗಳ ವಸ್ತು ಭಾವ. ಶೈಲಿ ಎಲ್ಲವೂ ಚಂದ. ಸಾಮಾನ್ಯ ಸಂಗತಿಗಳು ಕಟ್ಟಿಕೊಡುವ ರೀತಿಯೇ ಅದ್ಭುತ. ಅಲ್ಲಿ ಬರುವ 'ಅಯ್ಯಾ' ಪದ ವಿಶೇಷವಾಗಿ ಹೃದಯಕ್ಕೆ ತಟ್ಟುತಿತ್ತು. ಅಂಕಿತ ಸಹಿತ ವಚನ ರಚಿಸಿದ ನಾಯ್ಡು ಅವರು ಆಧುನಿಕ ವಚನ ಪರಂಪರೆಯಲ್ಲಿ ಬೆಳಕು ಮೂಡಿಸಿದವರು. ವಾಸ್ತವಿಕ ಬದುಕಿನ ನಾನಾ ಮುಖಗಳನ್ನ ವಚನಗಳ ಮೂಲಕ ತಿಳಿಸಿ ಸನ್ಮಾರ್ಗಕ್ಕೆ ದಾರಿ ತೋರುವ ಕೆಲಸ ಮಾಡಿದರು. 'ಸತ್ಯಪ್ರಿಯ' ಅಂಕಿತ ಬಳಸಿದ ನಾಯ್ಡು ಅವರು ಸತ್ಯದ ಹಾದಿಯಲ್ಲಿ ಸಾಗಿದರು. ಕ್ರಮೇಣ ವ್ಯಕ್ತಿನಿಷ್ಠ ವಚನಗಳ ಕಡೆ ವಾಲಿದ ಇವರು ಅಂಕಿತವನ್ನು ಆಗಾಗ್ಗೆ ಬದಲಿಸಿಕೊಳ್ಳುತ್ತಾ ಹೋದರು. ಸಾಮಾನ್ಯ ಓದುಗನನ್ನು ಅಷ್ಟಾಗಿ ಸೆಳೆಯದ, ಕೆಲವೇ ನಿರ್ದಿಷ್ಟ ಗುಂಪಿಗೆ ಸೀಮಿತವಾದ ವ್ಯಕ್ತಿನಿಷ್ಠ ವಚನಗಳು ನಾಯ್ಡು ಅವರಿಂದ ಸಾಕಷ್ಟು ರಚನೆಯಾದವು. ಹರಿಹರನ ರಗಳೆಯೋಪಾದಿಯಲ್ಲಿ ಸಾಗುವ ಧಾರ್ಮಿಕ ನೇತಾರರನ್ನ ಕುರಿತ ವಚನಗಳು ಇಲ್ಲಿವೆ. ಹಾಗೆಯೇ ತನಗೆ ಪ್ರಿಯವಾದ ವ್ಯಕ್ತಿಗಳಿಗೂ ನುಡಿ ಗೌರವವನ್ನು ಸಲ್ಲಿಸಲು ವಚನವನ್ನು ಮಾಧ್ಯಮವನ್ನಾಗಿ ಮಾಡಿಕೊಂಡಿದ್ದಾರೆ. ವ್ಯಕ್ತಿ ಬದಲಾದಂತೆ ಅಂಕಿತವೂ ಬದಲಾಗಿದೆ. ಆದರೆ ವಚನಗಳ ವಸ್ತು, ಆಶಯ, ಗುರಿಗಳಲ್ಲಿ ಏಕತಾನತೆ ಅಲ್ಲಲ್ಲಿ ನುಸುಳಿ ಓದುಗರಿಗೆ ಚರ್ವಿತ ಚರ್ವಣದ ಅನುಭವವಾಗುವುದುಂಟು. ಏನೇ ಆದರೂ ನಾಯ್ಡು ಅವರ ಸೃಜನಶೀಲತೆಯನ್ನು ಅಲ್ಲಗಳೆಯಲಾಗದು. ಅನೇಕ ಮಿತಿಗಳ ನಡುವೆಯೂ ಇವರು ವಚನಗಳಲ್ಲಿಯೇ ಜೀವನಚಿತ್ರಗಳನ್ನು ನೀಡುವ ವಿಶಿಷ್ಟ ಪ್ರಯೋಗವನ್ನು ಮಾಡಿದ್ದಾರೆ.

**ಕೊನೆ ಟಿಪ್ಪಣಿಗಳು :**


1. ಡಾ. ಸಂಗಮೇಶ ಹಂಡಿಗಿ, ಶ್ರೀ ಜಚನಿ ವಚನ ಸಾಹಿತ್ಯ-ಒಂದು ಅಧ್ಯಯನ, ಪು.ಸಂ-೧೨೨ (೧೯೯೫)
2. ಚಂದ್ರಯ್ಯನಾಯ್ಡು, ವಚನಾಭಿನಂದನ, ಪು.ಸಂ-೭ (೨೦೦೬)
3. ಚಂದ್ರಯ್ಯನಾಯ್ಡು, ವಚನಾಭಿವಂದನ, ಪು.ಸಂ-೩೭ (೨೦೦೭)
4. ಡಾ. ಪಂಚಾಕ್ಷರಿ ಹಿರೇಮಠ, ಮುನ್ನುಡಿ-ವಚನಾಭಿವಂದನ-ಚಂದ್ರಯ್ಯನಾಯ್ಡು, ಪು.ಸಂ-X(೨೦೦೭)
5. ಚಂದ್ರಯ್ಯನಾಯ್ಡು, ವಚನ ಶಿವ, ಪು.ಸಂ-೭ (೨೦೦೭)
6. ಡಾ. ದೇ.ಜ.ಗೌ, ಭಾರತ ಭೂಷಣ-ನ್ಯಾ, ಶಿವರಾಜ ಪಾಟೀಲ, ಶರಣ ಚೇತನ, ಸಚಿಚಿಕೆ-೩, ಜುಲೈ-೨೦೦೯
7. ಚಂದ್ರಯ್ಯನಾಯ್ಡು, ವಚನ ನಮನ, ಪು.ಸಂ-೧ (೨೦೦೭)
8. ಡಾ. ಸಂಗಮೇಶ ಹಂಡಿಗಿ, ಮುನ್ನುಡಿ, ವಚನ ನಮನ, ಪು.ಸಂ-XII(೨೦೦೭)
9. ಚಂದ್ರಯ್ಯನಾಯ್ಡು, ವಚನ ವೀರೇಂದ್ರ, ಪು.ಸಂ-೧೨೧ (೨೦೦೯)
10. ಚಂದ್ರಯ್ಯನಾಯ್ಡು, ವಚನಾರತಿ, ಪು.ಸಂ-೪೪ (೨೦೦೯)